**ಸಾಕ್ಷಿಯನ್ನು ದಿಃ *06/02/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಃ 1 ನೇ ಪ್ರತಿವಾದಿಯ ಪರ ವಕೀಲರಿಂದ.**

ನಾನು ನ್ಯಾಯಾಲಯಕ್ಕೆ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| ಅ.ನಂ. | ದಾಖಲೆಗಳು |
|---|---|
| **ನಿ.ಡಿ.1** | ಹಳೆ ಪಿಐಡಿ ನಂ.1062 ಉತಾರದ ದೃಢಿಕೃತ ನಕಲು |
| **ನಿ.ಡಿ.2** | ಹಳೆ ಪಿಐಡಿ ನಂ.2195 ಉತಾರದ ದೃಢಿಕೃತ ನಕಲು |
| **ನಿ.ಡಿ.3** | ಪ್ರಕಾಶ ಶಿವಪ್ಪ ಬಡಿಗೇರ ಇವರ ಮರಣ ಪ್ರಮಾಣಪತ್ರದ ಆನಲೈನ ಪ್ರತಿ |
| **ನಿ.ಡಿ.4** | ದಿಃ12-08-2012 ರಂದು ಆಗಿರುವ ಗೃಹ ಪ್ರವೇಶದ ಆಮಂತ್ರಣ ಪತ್ರಿಕೆ |
| **ನಿ.ಡಿ.5** | ವಿಜಯವಾಣಿ ದಿನಪತ್ರಿಕೆಯಲ್ಲಿ ದಿಃ03-10-2022 ರಂದು ಪ್ರಕಟಿತಗೊಂಡಿರುವ ಸಾರ್ವಜನಿಕ ನೋಟೀಸು |
| **ನಿ.ಡಿ.6** | 1 ವಿದ್ಯುತ ಬಿಲ್ಲು ಅದರ ಪಾವತಿ (ಒಟ್ಟಾಗಿ) |
| **ನಿ.ಡಿ.7** | ಆಸ್ತಿ ತೆರಿಗೆ ತುಂಬಿರುವ ಐದು ಚಲನಗಳು (ಒಟ್ಟಾಗಿ) |
| **ನಿ.ಡಿ.8** | ಆರ್.ಎಸ್.ನಂ. 1 ಹಿಸ್ಸಾ 2 ರ 2018-19, 2020-21, 2021-22 ರ ಎರಡು ಪುಟಗಳು ಮತ್ತು ಕ್ರಮವಾಗಿ ಒಂದು ಒಂದು ಪುಟಗಳ ಪ್ರತ್ಯೇಕ ಪಹಣಿ ಪತ್ರಿಕೆ (ಒಟ್ಟಾಗಿ) |
| **ನಿ.ಡಿ.9** | ದಿಃ31-01-2021 ರಂದು ನೊಂದಾಯಿತ 8 ಪುಟಗಳ ಖರೀದಿ ಪತ್ರದ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.10** | ಆರ್.ಎಸ್.ನಂ. 1 ಹಿಸ್ಸಾ 1 ರ ಪಿಟಿ ಶೀಟಿನ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.11** | ಭೂ ದಾಖಲೆಗಳು ಸಹಾಯಕ ನಿರ್ದೇಶಕರು ಧಾರವಾಡ ತಯಾರಿಸಿದ ನಕಾಶೆಯ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.12** | ದಿಃ18-09-2021 ರಂದು ಸಾಕ್ಷಿದಾರರಿಗೆ ನೀಡಿರುವ ಪತ್ರದ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.13** | ಸದರಿ ಪತ್ರಕ್ಕೆ ದಿಃ13-10-2021 ರಂದು ಸಾಕ್ಷಿದಾರರು ನೀಡಿರುವ ಪ್ರತ್ಯೂತ್ತರದ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.14 ಮತ್ತು 15** | ಛಾಯಾ ಯಾದವಾಡ ಮತ್ತು ಗುರುಬಸಪ್ಪ ಕುಬಸದ ಇವರ ಆಧಾರಕಾರ್ಡಗಳ ನ್ಯಾಯಾಲಯದ ದೃಢಿಕೃತ ನಕಲುಗಳು ಕ್ರಮವಾಗಿ |
| **ನಿ.ಡಿ.16** | ಎಂ.ಆರ್.1221/2014-15 ರ ಮೂರು ಪುಟಗಳ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.17** | ಎಂ.ಆರ್.ನಂ.ಹೆಚ್.197/2019-20 ರ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.18** | ಶ್ರೀ ಜಗದೀಶ ಬ ಪಾಟೀಲ ವಕೀಲರ ಮುಖಾಂತರ ಕಳಿಸಿದ ಕಾನೂನುಬದ್ಧ ನೋಟೀಸು ಮತ್ತು ಅಂಚೆ ರಶೀದಿಗಳು, ಅಂಚೆ ಸ್ವೀಕೃತಿ ಪತ್ರಗಳು ನ್ಯಾಯಾಲಯದ ದೃಢಿಕೃತ ನಕಲು (ಒಟ್ಟಾಗಿ) |

| | |
|---|---|
| **ನಿ.ಡಿ.19** | ಶ್ರೀ ಡಿ.ಹೆಚ್.ಚಿದಾನಂದ ವಕೀಲರ ಮುಖಾಂತರ ನೀಡಿರುವ ಪ್ರತ್ಯೂತ್ತರದ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.20** | ಅಸಲು ದಾವೆ ನಂ.22/2010 ರ ವಾದ ಪತ್ರದ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.21** | ಸದರಿ ಅಸಲು ದಾವೆಯ ತೀರ್ಪು ಮತ್ತು ಡಿಕ್ರಿಯ ನ್ಯಾಯಾಲಯದ ದೃಢಿಕೃತ ನಕಲುಗಳು (ಒಟ್ಟಾಗಿ) |
| **ನಿ.ಡಿ.22** | ಅಸಲು ದಾವೆ ನಂ.311/2012 ರ ವಾದ ಪತ್ರದ ನ್ಯಾಯಾಲಯದ ದೃಢಿಕೃತ ನಕಲು |
| **ನಿ.ಡಿ.23** | ಸದರಿ ಅಸಲು ದಾವೆಯ ತೀರ್ಪು ಮತ್ತು ಡಿಕ್ರಿಯ ನ್ಯಾಯಾಲಯದ ದೃಢಿಕೃತ ನಕಲುಗಳು (ಒಟ್ಟಾಗಿ) |
| **ನಿ.ಡಿ.24** | ಆರ್.ಎ.ನಂ.88/2009 ರ ಮೇಲ್ಮನವಿಯ ದೃಢಿಕೃತ ನಕಲು |
| **ನಿ.ಡಿ.25** | ಸದರಿ ಆರ್.ಎ. ನಲ್ಲಿ ಸಲ್ಲಿಸಿರುವ ರಾಜಿಪತ್ರದ ದೃಢಿಕೃತ ನಕಲು |
| **ನಿ.ಡಿ.26** | ಅದರಂತೆ ಆಗಿರುವ ರಾಜಿ ಡಿಕ್ರಿಯ ಎರಡು ಪುಟಗಳ ದೃಢಿಕೃತ ನಕಲು |
| **ನಿ.ಡಿ.27** | ಎಂ.ಆರ್.ನಂ.ಪಿ79/2017-18 ರ ಪ್ರತಿಯ ದೃಢಿಕೃತ ನಕಲು |

ಆದುದರಿಂದ ಪ್ರಮಾಣಪತ್ರ ಮತ್ತು ದಾಖಲೆಗಳನ್ನು ಪರಿಶೀಲಿಸಿ ದಾವೆಯನ್ನು ವಜಾಗೊಳಿಸಬೇಕಾಗಿ ವಿನಂತಿ.

***ಪಾಟೀ ಸವಾಲು : ಶ್ರೀ ಜೆಬಿಪಿ ವಕೀಲರಿಂದ ವಾದಿಯ ಪರವಾಗಿ.***

ವಾದಿ ಮಾಡಿರುವ ಮಾಗಣಿಯ ಕುರಿತು ನನಗೆ ಗೊತ್ತಿದೆ. ದಾವಾದಾಸ್ತಿಯ ನಂಬರ, ಕ್ಷೇತ್ರ ಮತ್ತು ಚಕ್ಕುಬಂದಿಯ ಕುರಿತು ನನಗೆ ಗೊತ್ತಿಲ್ಲ. ಆರ್.ಎಸ್.ನಂ. 1/2 ರನ್ನು ವಾದಿಯು ಪ್ರತಿವಾದಿ ನಂ.2 ರಿಂದ 6 ರಿಂದ ಖರೀದಿ ಮಾಡಿರುವ ವಿಷಯ ಸಂಗತಿ ನನಗೆ ಗೊತ್ತಿದೆ. ವಾದಿಯು ಹಾಜರುಪಡಿಸಿರುವ ದಾಖಲಾತಿಗಳ ಕುರಿತು ನಾನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿದ್ದೇನೆ. ನಾನು ನಮ್ಮ ವಕೀಲರ ಮುಖಾಂತರ ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ಸಾಕ್ಷಿ ಪ್ರಮಾಣಪತ್ರದಲ್ಲಿರುವ ವಿಷಯ ಸಂಗತಿ ಮತ್ತು ದಾಖಲಾತಿಗಳ ಬಗ್ಗೆ ನನಗೆ ಗೊತ್ತಿದೆ.

ನಾನು ಪಿಯುಸಿವರೆಗೆ ಓದಿದ್ದೇನೆ. ನನ್ನ ಪತಿ ಡಿಪ್ಲೋಮಾ ಇಂಜಿನಿಯರ ಇದ್ದು, ಫೋಟೊ ಸ್ಟುಡಿಯೋ ಇಟ್ಟುಕೊಂಡಿರುತ್ತಾರೆ. ನಾವು ಕಳೆದ 30 ವರ್ಷಗಳಿಂದ ಧಾರವಾಡದ ಶಿವಗಿರಿಯ ವಿಶ್ವಭಾರತಿ ಕಾಲೋನಿಯಲ್ಲಿ ವಾಸವಿರುತ್ತೇವೆ. ನಿ.ಪಿ.9 ರಂತೆ ಇರುವ ದಿಃ18-09-2021 ರಂದು ನೊಂದಾಯಿತ ಅಂಚೆ ಮೂಲಕ ನೀಡಿರುವ ನೋಟೀಸು ನನಗೆ ತಲುಪಿರುತ್ತದೆ. ನಾನು ಅದಕ್ಕೆ ನಿ.ಪಿ.10 ರಂತೆ ಪ್ರತ್ಯೂತ್ತರ

ನೀಡಿರುತ್ತೇನೆ ಎಂದರೆ ನಿಜ. ಸದರಿ ನೋಟೀಸಿನಲ್ಲಿ ಬರೆದಿರುವ ಅತೀಕ್ರಮಣದ ವಿಷಯ ಸಂಗತಿ ನನಗೆ ಗೊತ್ತಿದೆ. ನಾನು ನೀಡಿರುವ ಪ್ರತ್ಯೂತ್ತರದಲ್ಲಿ ನಾನು ಖರೀದಿ ಮಾಡಿದ್ದೇನೆ ಎಂದು ಹೇಳಲಾದ ಆಸ್ತಿ ನಂಬರ ಕಾಣಿಸಿಲ್ಲ ಎಂದರೆ ನಿಜ. ನನ್ನ ಪ್ರತ್ಯೂತ್ತರದಲ್ಲಿ ಬರೆದಿರುವ ರಾಜಿ ವಿಷಯ ಸಂಗತಿ ನಿಜವಿರುತ್ತದೆ. ನನ್ನ ಪ್ರತ್ಯೂತ್ತರ ನೋಡಿದರೆ ವಾದಿಯು ಆರ್.ಎಸ್.ನಂ. 1/2 ರ 2 ಗುಂಟೆ 10 ಆಣೆ ಜಾಗೆಯನ್ನು ಖರೀದಿ ಮಾಡಿರುವ ವಿಷಯ ಸಂಗತಿ ನನಗೆ ಗೊತ್ತಿರುತ್ತದೆ ಎಂದರೆ ನಿಜ. ಈ ರೀತಿ ಅತೀಕ್ರಮಿಸಿದ ಜಾಗೆಯನ್ನು ನೋಟೀಸಿನ ನಂತರ ಬಿಟ್ಟುಕೊಡಲಾರದ ಕಾರಣ ವಾದಿಯು ದಿ:20-12-2021 ರಂದು ಕಾನೂನುಬದ್ದ ನೋಟೀಸನ್ನು ತಮ್ಮ ವಕೀಲರ ಮುಖಾಂತರ ಕಳಿಸಿದರು ಎಂದರೆ ನಿಜ. ಅದಕ್ಕೆ ನಾನು ಪ್ರತ್ಯೂತ್ತರವನ್ನು ನಮ್ಮ ವಕೀಲರ ಮುಖಾಂತರ ಕಳಿಸಿರುತ್ತೇನೆ ಎಂದರೆ ನಿಜ. ನಿ.ಡಿ.5 ರಂತೆ ಇರುವ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟಿಸಿರುವ ಪ್ರಕಟಣೆಗೆ ಮಾಹಿತಿ ನಾನೇ ನೀಡಿರುತ್ತೇನೆ. ಸದರಿ ಜಾಹಿರಾತನ್ನು ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ ನಂತರ ನೀಡಿರುತ್ತೇನೆ ಎಂದರೆ ನಿಜ. ಸಾಕ್ಷಿದಾರರಿಗೆ ಸದರಿ ಪ್ರಕಟಣೆಯ ಜಾಹಿರಾತನ್ನು ಓದಿ ಹೇಳಲಾಗಿ, ಸಾಕ್ಷಿದಾರರು ಅದನ್ನು ಕೇಳಿ ಅದರಲ್ಲಿರುವ ಬರೆದಿರುವ ವಿಷಯ ಸಂಗತಿಗಳು ನಿಜವಿರುತ್ತವೆ ಎಂದು ಒಪ್ಪಿಕೊಂಡಿರುತ್ತಾರೆ.

ನಾನೇ ಸಲ್ಲಿಸಿರುವ ನಿ.ಡಿ.25 ಮತ್ತು 26 ರಂತೆ ಇರುವ ರಾಜಿ ಪತ್ರ ಮತ್ತು ಡಿಕ್ರಿಯ ಪ್ರಕಾರ ಸದರಿ ರಾಜಿ ಮಾಡಿಕೊಂಡಿರುವ ಆಸ್ತಿಗಳ ನಂಬರ ಮತ್ತು ವಿವರಗಳು ನನಗೆ ಗೊತ್ತು. ಸಾಕಿದಾರರಿಗೆ ಸದರಿ ರಾಜಿ ಡಿಕ್ರಿಯ ಆಸ್ತಿ ತೋರಿಸಲಾಗಿ ಅದು ಆರ್.ಎಸ್.ನಂ. 125 ರನ್ನು ಪ್ರಸ್ತುತ ಪ್ರತಿವಾದಿ ನಂ.2 ರಿಂದ 4 ಇವರೊಂದಿಗೆ ರಾಜಿ ಮಾಡಿಕೊಂಡಿದ್ದು ಇರುತ್ತದೆ ಎಂದು ಸೂಚಿಸಲಾಗಿ, ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ.

ನನ್ನ ಪತಿಯ ಜೀವಿತ ಕಾಲದಲ್ಲಿ ನ್ಯಾಯಾಲಯದಲ್ಲಿರುವ ಪ್ರಕರಣಗಳ ಕುರಿತು ನನ್ನೊಂದಿಗೆ ಚರ್ಚಿಸಿದ್ದರು. ಸದರಿ ರಾಜಿ ಡಿಕ್ರಿಯ ಪ್ರಕಾರ ಹತ್ತು ಲಕ್ಷ ರೂಪಾಯಿಗಳನ್ನು ನಾವು ಮಾಲೀಕರಾದ

ಪ್ರಸ್ತುತ ದಾವೆಯ ಪ್ರತಿವಾದಿಗಳಾದ 2 ರಿಂದ 4 ಇವರಿಗೆ ನೀಡಿರುತ್ತೇವೆ. ಸದರಿ ಹತ್ತು ಲಕ್ಷ ರೂಪಾಯಿಗಳನ್ನು ನ್ಯಾಯಾಲಯದಲ್ಲಿ ಚೆಕ್ಕ ಮೂಲಕ ನೀಡಿರುತ್ತೇವೆ.

ಸದರಿ ರಾಜಿ ಪತ್ರಕ್ಕೆ ಉಭಯ ಪಕ್ಷಗಾರರು ಮತ್ತು ಉಭಯ ಪರ ವಕೀಲರು ಸಹಿ ಮಾಡಿರುತ್ತೇವೆ.

ನನ್ನ ಪ್ರಮಾಣಪತ್ರದ 1 ನೇ ಪುಟದಲ್ಲಿ ಬರೆದಿರುವ ದಿಃ25-06-2009 ರಂದು ಮಾಡಿಕೊಂಡಿರುವ ಕರಾರು ಅಥವಾ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ಯಾವ ಆಸ್ತಿ ಕುರಿತು ಇದೆ ಎಂದು ನನ್ನ ಪ್ರಮಾಣಪತ್ರದಲ್ಲಿ ಕಾಣಿಸಿಲ್ಲ ಎಂದರೆ ನಿಜ. ಸದರಿ ಅಕ್ರಮ ಸಕ್ರಮ ದಾಖಲೆ ಪ್ರಕಾರ ನನ್ನ ಪತಿ ಮಹಾನಗರ ಪಾಲಿಕೆ ದಾಖಲೆಗಳಲ್ಲಿ ತಮ್ಮ ಹೆಸರನ್ನು ದಾಖಲೆಸಲು ಅರ್ಜಿ ನೀಡಲಾರದ ಕಾರಣ ಅಸಲು ದಾವೆ ನಂ.22/2010 ನ್ನು ದಾಖಲಿಸಿರುವ ಕುರಿತು ಬರೆದಿರುವ ವಿಷಯ ಸಂಗತಿ ನಿಜವಿರುತ್ತದೆ. ಸದರಿ ದಾವೆ ಶಾಶ್ವತ ನಿರ್ಭಂದಕಾಜ್ಞೆ ಕೋರಿ ಮಾಡಿದ್ದು, ಅದು ಪ್ರಸ್ತುತ ಪ್ರತಿವಾದಿ ನಂ.2 ರಿಂದ 4 ರವರಿಗೆ ಸಹ ಡಿಕ್ರಿ ಆಗಿರುತ್ತದೆ ಎಂದರೆ ನಿಜ. ಸದರಿ ದಾವೆಯಲ್ಲಿ ದಾವೆ ಆಸ್ತಿ ನಂ.125 ಸಪ್ತಾಪೂರ ವ್ಯಾಪ್ತಿಯ ಮೇಲೆ ಹೂಡಿರುತ್ತಾರೆ ಎಂದರೆ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ಡಿಕ್ರಿಯ ವಿರುದ್ದ ಪ್ರತಿವಾದಿಯರಾದ ಪ್ರಸ್ತುತ ಪ್ರತಿವಾದಿಯರು ಸದರಿ ಡಿಕ್ರಿ ಪ್ರಶ್ನಿಸಿ ಅಸಲು ದಾವೆ ನಂ.311/2012 ನ್ನು ದಾಖಲಿಸಿದರು ಎಂದರೆ ನಿಜ. ಸದರಿ ದಾವಾದಾಸ್ತಿಯ ನಂಬರ ಮತ್ತು ಚಕ್ಕುಬಂದಿ ತೋರಿಸಿದಾಗ ಅದು ನಿಜವೆಂದು ಒಪ್ಪಿಕೊಂಡಿರುತ್ತಾರೆ. ಸದರಿ ಅಸಲು ದಾವೆ ಸಹ ಡಿಕ್ರಿಯಾಗಿದ್ದು, ಅದನ್ನು ಪ್ರಶ್ನಿಸಿ ಆರ್.ಎ.88/2019 ರನ್ನು ದಾಖಲೆಸಿದ್ದು ಇರುತ್ತದೆ ಎಂದರೆ ನಿಜ. ಸದರಿ ಮೇಲ್ಮನವಿಯಲ್ಲಿ ಸಹ ದಾವಾದಾಸ್ತಿ 125 ಇರುತ್ತದೆ ಎಂದರೆ ನಿಜ. ಅದರಂತೆ ರಾಜಿ ಡಿಕ್ರಿಯ ದಾವಾದಾಸ್ತಿ ಸಹ 125 ಇರುತ್ತದೆ ಎಂದರೆ ನಿಜ.

ಈ ರೀತಿ ನಮ್ಮ ಮಧ್ಯ ಮತ್ತು ಪ್ರಸ್ತುತ ಪ್ರತಿವಾದಿ ನಂ.2 ರಿಂದ 4 ಇವರ ನಡುವೆ ನಡೆದಿರುವ ಮೇಲೆ ಕಾಣಿಸಿದ ದಾವೆ ಮತ್ತು ಮೇಲ್ಮನವಿ ಸಂಗತಿಗಳನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಿಜ ಎಂದು ಉತ್ತರಿಸುತ್ತಾರೆ.

ಈ ರೀತಿ ಆಗಿರುವ ರಾಜಿ ಡಿಕ್ರಿಯ ನಂತರ ಸಹ ನನ್ನ ಮೃತ ಪತಿ ಮಹಾನಗರ ಪಾಲಿಕೆಯ ದಾಖಲೆಗಳಲ್ಲಿ ತಮ್ಮ ಹೆಸರನ್ನು ದಾಖಲಿಸಲು ಪ್ರಯತ್ನ ಮಾಡಿದರಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಮಾಡಿದ್ದರು ಎಂದು ಉತ್ತರಿಸುತ್ತಾರೆ. ಈ ಕುರಿತು ಯಾವುದೇ ದಾಖಲೆ ಇರಲಾರದ ಕಾರಣ ಸದರಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.